ನಂ.ಮಿಸ್/ಸಿಆರ್/214/2009-10 ಪುರಸಭಾ ಕಾರ್ಯಾಲಯ, ಪುತ್ತೂರು.

ದಿನಾಂಕ : 02/01/2010

**ಪುರಸಭಾ ವಾಣಿಜ್ಯ ಸಂಕೀರ್ಣಗಳ ಅಂಗಡಿ ಕೋಣೆಗಳ (ಅಲ್ಪಾವದಿ ಟೆಂಡರ್)**
**ಬಹಿರಂಗ ಹರಾಜು ಪ್ರಕಟಣೆ**

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಪುತ್ತೂರು ಪುರಸಭೆಗೆ ಸೇರಿದ ಕುಡ್ಸೆಂಪ್ ಯೋಜನೆಯಲ್ಲಿ ನಿರ್ಮಿತವಾದ ವಾಣಿಜ್ಯ ಸಂಕೀರ್ಣದಲ್ಲಿ ಈ ಕೆಳಗಿನ ಕೋಣೆಗಳನ್ನು ದಿ. **01/04/2010** ರಿಂದ ದಿ. **31/03/2030** ವರೆಗೆ 20 ವರ್ಷಗಳ ಅವಧಿಗೆ ಮಾಸಿಕ ಲೀಸ್ (ಬಾಡಿಗೆ) ಆಧಾರದ ಮೇಲೆ ಅನುಭೋಗದ ಹಕ್ಕನ್ನು ಕೆಳಗೆ ಕಾಣಿಸಿದಂತೆ ಪ್ರತಿ ಕೋಣೆಗೆ ಬಾಡಿಗೆ ನಿಗಧಿಪಡಿಸಿದ್ದು ಸದರಿ ಬಾಡಿಗೆಯನ್ನು ಪ್ರತಿ ಮೂರು ವರ್ಷಗಳಿಗೊಮ್ಮೆ ಶೇ. 10 ರಂತೆ ಹೆಚ್ಚಿಸುವ ಷರತ್ತಿಗೆ ಒಳಪಟ್ಟು ಹಾಗೂ 20 ವರ್ಷಗಳಿಗೆ ಮರು ಪಾವತಿ ಇಲ್ಲದ ಪ್ರೀಮಿಯಂ ಮೊತ್ತಕ್ಕೆ (ನಾನ್ ರಿಫಂಡೇಬಲ್ ಪ್ರೀಮಿಯಂ) ಏಲಂ/ಟೆಂಡರ್ ಮೂಲಕ ಪಡೆಯಲು ಎಲ್ಲಾ ಷರತ್ತುಗಳಿಗೆ ಅನುಸಾರವಾಗಿ ದಿ. **18/01/2010** ನೇ **ಪೂರ್ವಾಹ್ನ 11.00** ಗಂಟೆಗೆ ಸರಿಯಾಗಿ ಪುರಸಭಾ ಕಛೇರಿಯಲ್ಲಿ ಪುರಸಭಾ ಅಧ್ಯಕ್ಷರು ಮತ್ತು ಮುಖ್ಯಾಧಿಕಾರಿಗಳು ಅಥವಾ ಅವರಿಂದ ಅಧಿಕಾರ ಪಡೆದವರ ಮುಖಾಂತರ ಆಸಕ್ತರು ಸೂಚಿಸುವ ಪ್ರೀಮಿಯಂ ಅಧಿಕ ಮೊತ್ತಕ್ಕೆ ಬಹಿರಂಗ ಹರಾಜು/ಟೆಂಡರ್ ಮೂಲಕ ವಿಲೇವಾರಿ ಮಾಡಲಾಗುವುದು. ಆಸಕ್ತರು ಏಲಂ ದಿನ ಪೂರ್ವಾಹ್ನ 11.00 ಗಂಟೆವರೆಗೆ ಪ್ರತ್ಯೇಖ ಪ್ರತ್ಯೇಕ ಇ.ಎಂ.ಡಿ ಮೊಬಲಗನ್ನು ಪುರಸಭೆಗೆ ಪಾವತಿಸಿ ಹರಾಜಿನಲ್ಲಿ ಭಾಗವಹಿಸುವುದು. 20 ವರ್ಷಗಳಿಗೆ ಮರುಪಾವತಿ ಇಲ್ಲದ ಪ್ರೀಮಿಯಂ (ನಾನ್ ರಿಫಂಡೇಬಲ್ ಪ್ರೀಮಿಯಂ) ಹಣವನ್ನು ಏಕಗಂಟಿನಲ್ಲಿ ಪಾವತಿಸಿ ಸದ್ರಿ ಮಳಿಗೆಯನ್ನು ಮಾನ್ಯ ಜಿಲ್ಲಾಧಿಕಾರಿಯವರ ಅನುಮೋದನೆ ಪಡೆದೇ ಖಾಯಂ ಮಾಡಲಾಗುವುದು. ಮುಂಗಡ ಹಣ ಮತ್ತು ಪ್ರೀಮಿಯಂ ಹಣವನ್ನು ಮರು ಪಾವತಿಸಲಾಗುವುದಿಲ್ಲ. ಸದ್ರಿ ಪ್ರೀಮಿಯಂ ಮೊತ್ತಕ್ಕೆ ಬ್ಯಾಂಕು ಗ್ಯಾರಂಟಿ ನೀಡತಕ್ಕ ಷರತ್ತಿಗೊಳಪಟ್ಟು ಬಹಿರಂಗ ಯಾ ಟೆಂಡರ್ ಮುಖಾಂತರ ಅನುಭೋಗದ ಹಕ್ಕನ್ನು ಪಡೆದುಕೊಳ್ಳಬಹುದು. ಅದೇ ದಿನ ಅಪರಾಹ್ನ 4.00 ಗಂಟೆಗೆ ಹಾಜರಿರುವ ಟೆಂಡರ್‌ದಾರರ ಸಮಕ್ಷಮ ಟೆಂಡರ್ ತೆರೆಯಲಾಗುವುದು. ಈ ಹಿಂದೆ ಸದ್ರಿ ಸಂಕೀರ್ಣದಲ್ಲಿ ಕೋಣೆಯನ್ನು ಬಾಡಿಗೆ ನೆಲೆಯಲ್ಲಿ ಪಡಕೊಂಡವರೂ ಸದ್ರಿಯವರ ಅವಧಿ ಮುಕ್ತಾಯಗೊಳ್ಳಲಿರುವುದರಿಂದ ಈ ಬಹಿರಂಗ ಹರಾಜಿನಲ್ಲಿ ಭಾಗವಹಿಸಿ ಮಳಿಗೆಯನ್ನು ಪಡಕೊಳ್ಳಬಹುದಾಗಿದೆ.

**ತಖ್ತೆ:**

| ಕ್ರ. ಸಂ | ಕಟ್ಟಡದ ವಿವರ | ಏಲಂಗೆ ಇರುವ ಕೋಣೆಗಳ ಕ್ರಮಾಂಕ | ಲಭ್ಯವಿರುವ ಒಟ್ಟು ಕೋಣೆಗಳು | ಪ್ರತಿ ಕೋಣೆಯ ವಿಸ್ತೀರ್ಣ (ಚ.ಅ) ಗಳಲ್ಲಿ | ಪ್ರತಿ ಅಂಗಡಿ ಕೋಣೆಗೆ ನಿಗಧಿ ಪಡಿಸಿದ ಮಾಸಿಕ ಲೈಸಸ್ಸು ಫೀ ತಲಾ | ಸರಕಾರಿ ಸವಾಲು ಏಲಂ ಠೇವಣಾತಿ ಟೆಂಡರ್ ಇ.ಎಂ.ಡಿ ಮೊತ್ತ | ನಿಗದಿಪಡಿಸಿದ ಮರುಪಾವತಿ ಇಲ್ಲದ ಪ್ರೀಮಿಯಂ |
|---|---|---|---|---|---|---|---|
| 1 | ಕೆ.ಎಸ್.ಆರ್.ಟಿ.ಸಿ ಬಳಿಯಿರುವ ಕುಡ್ಸೆಂಪ್ ಯೋಜನೆಯಡಿ ನಿರ್ಮಿತ ವಾಣಿಜ್ಯ ಸಂಕೀರ್ಣ | 1,2,5,6,7,8 27, 28, 29, 30 | 10 | 119.00 | 600.00 | ಪ್ರತೀ ಕೋಣೆಗೆ ತಲಾ (ರೂ) 10,000.00 | 1,38,000.00 |
| 2 | ಕೆ.ಎಸ್.ಆರ್.ಟಿ.ಸಿ ಬಳಿಯಿರುವ | 3,4,25.26 | 4 | 145.00 | 700.00 | ಪ್ರತೀ ಕೋಣೆಗೆ | 1,68,000.00 |

| | | | | | | | |
|---|---|---|---|---|---|---|---|
| | ಕುಡ್ಸೆಂಪ್ ಯೋಜನೆಯಡಿ ನಿರ್ಮಿತ ವಾಣಿಜ್ಯ ಸಂಕೀರ್ಣ | | | | | ತಲಾ (ರೂ) 10,000.00 | |
| 3 | ಕೆ.ಎಸ್.ಆರ್.ಟಿ.ಸಿ ಬಳಿಯಿರುವ ಕುಡ್ಸೆಂಪ್ ಯೋಜನೆಯಡಿ ನಿರ್ಮಿತ ವಾಣಿಜ್ಯ ಸಂಕೀರ್ಣ | 10,15,17,19 | 4 | 187.00 | 900.00 | ಪ್ರತೀ ಕೋಣೆಗೆ ತಲಾ (ರೂ) 10,000.00 | 2,16,000.00 |
| 4 | ಕೆ.ಎಸ್.ಆರ್.ಟಿ.ಸಿ ಬಳಿಯಿರುವ ಕುಡ್ಸೆಂಪ್ ಯೋಜನೆಯಡಿ ನಿರ್ಮಿತ ವಾಣಿಜ್ಯ ಸಂಕೀರ್ಣ | 12,13, 21,22 | 4 | 124.00 | 600.00 | ಪ್ರತೀ ಕೋಣೆಗೆ ತಲಾ (ರೂ) 10,000.00 | 1,43,000.00 |
| 5 | ಕೆ.ಎಸ್.ಆರ್.ಟಿ.ಸಿ ಬಳಿಯಿರುವ ಕುಡ್ಸೆಂಪ್ ಯೋಜನೆಯಡಿ ನಿರ್ಮಿತ ವಾಣಿಜ್ಯ ಸಂಕೀರ್ಣ | 9, 11, 14, 20,23, 31 | 6 | 141.00 | 700.00 | ಪ್ರತೀ ಕೋಣೆಗೆ ತಲಾ (ರೂ) 10,000.00 | 1,63,000.00 |
| 6 | ಕೆ.ಎಸ್.ಆರ್.ಟಿ.ಸಿ ಬಳಿಯಿರುವ ಕುಡ್ಸೆಂಪ್ ಯೋಜನೆಯಡಿ ನಿರ್ಮಿತ ವಾಣಿಜ್ಯ ಸಂಕೀರ್ಣ | 24 | 1 | 213.00 | 1,000.00 | 10,000.00 | 2,46,000.00 |
| 7 | ನೆಲ್ಲಿಕಟ್ಟೆ ಖಾಸಗಿ ಬಸ್ಸು ನಿಲ್ದಾಣದ ಬಳಿ ಇರುವ ವಾಣಿಜ್ಯ ಸಂಕೀರ್ಣ | 1,2,3,56 | 5 | 122.20 | 700.00 | ಪ್ರತೀ ಕೋಣೆಗೆ ತಲಾ (ರೂ) 10,000.00 | 1,60,000.00 |
| 8 | ನೆಲ್ಲಿಕಟ್ಟೆ ಖಾಸಗಿ ಬಸ್ಸು ನಿಲ್ದಾಣದ ಬಳಿ ಇರುವ ವಾಣಿಜ್ಯ ಸಂಕೀರ್ಣ | 4 | 1 | 183.13 | 1000.00 | 10,000.00 | 2,40,000.00 |
| 9 | ನೆಲ್ಲಿಕಟ್ಟೆ ಖಾಸಗಿ ಬಸ್ಸು ನಿಲ್ದಾಣದ ಬಳಿ ಇರುವ ವಾಣಿಜ್ಯ ಸಂಕೀರ್ಣ | 8 | 1 | 211.54 | 1200.00 | 10,000.00 | 2,78,000.00 |
| 10 | ಕೆ.ಎಸ್.ಆರ್.ಟಿ.ಸಿ | 16,18 | 2 | 138.00 | 700.00 | 10,000.00 | 1,60,000.00 |

| | | | | | | | |
|---|---|---|---|---|---|---|---|
| | ಬಳಿಯಿರುವ ಕುಡ್ಸೆಂಪ್ ಯೋಜನೆಯಡಿ ನಿರ್ಮಿತ ವಾಣಿಜ್ಯ ಸಂಕೀರ್ಣ | | | | | | |

**ಷರತ್ತುಗಳು**

1. ಪ್ರತಿ ಕೋಣೆಗೆ ಪ್ರತ್ಯೇಕ ಪ್ರತ್ಯೇಕ ಇ.ಎಂ.ಡಿ/ಠೇವಣಿ ಪಾವತಿಸಿ ಏಲಂ/ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವುದು.
2. ಬಹಿರಂಗ ಹರಾಜು ಹಾಗೂ ಮುಚ್ಚಿದ ಟೆಂಡರ್ (ಕ್ಲೋಸ್ಡ್ ಟೆಂಡರ್) ಗೆ ಪ್ರತ್ಯೇಕ ಪ್ರತ್ಯೇಕ ಇ.ಎಂ.ಡಿ.ಯನ್ನು ಪಾವತಿಸುವುದು. ಮುಚ್ಚಿದ ಟೆಂಡರ್‌ಗೆ ಸೂಚಿಸಿದಂತಹ ಠೇವಣಿಯನ್ನು ಡಿ.ಡಿ. ಮುಖಾಂತರ ಪಾವತಿಸುವುದು.
3. ನಿಗದಿತ ಅವಧಿ ಮತ್ತು ಸಮಯದ ಒಳಗೆ ಬಂದಂತಹ ಟೆಂಡರ್ ಮತ್ತು ಬಿಡ್ಡುದಾರರನ್ನು ಮಾತ್ರ ಪರಿಗಣಿಸಲಾಗುವುದು. ನಂತರ ಬಂದ ಬಿಡ್ಡುದಾರರನ್ನು ಪರಿಗಣಿಸಲಾಗುವುದಿಲ್ಲ.
4. ಏಲಂ/ಟೆಂಡರಿಗೆ ಸಂಬಂಧಿಸಿದ ಮಾಹಿತಿಯನ್ನು ಕಛೇರಿಯಲ್ಲಿ ಕಛೇರಿ ಅವಧಿಯಲ್ಲಿ ಪಡಕೊಳ್ಳುವುದು.
5. ರೂ. 50/- ನ್ನು ಕಛೇರಿಗೆ ಪಾವತಿಸಿ ನಿಗದಿತ ಟೆಂಡರ್ ನಮೂನೆಯನ್ನು ಕಛೇರಿಯಿಂದ ಪಡಕೊಳ್ಳಲು ಸೂಚಿಸಿದೆ.

ಸಹಿ/-
ಅಧ್ಯಕ್ಷರು,
ಪುರಸಭೆ ಪುತ್ತೂರು

ಸಹಿ/-
ಮುಖ್ಯಾಧಿಕಾರಿ,
ಪುರಸಭೆ ಪುತ್ತೂರು

***-***